## ತಾಳ್ಮೆ ಕೆಡಿಸುತ್ತಿವೆ

ಟೀವಿಗಳಲ್ಲಿ ಲೇಡಿ ಡಾನ್‌ಗಳದೇ ದರ್ಬಾರು. 'ಅಗ್ನಿಸಾಕ್ಷಿ'ಯ ಚಂದ್ರಿಕಾ, 'ಲಕ್ಷ್ಮೀಬಾರಮ್ಮ'ದ ಆಯಿ, ಕುಮುದಾ 'ರಾಧಾರಮಣ'ದ ಸಿತಾರಾ 'ಸುಬ್ಬಲಕ್ಷ್ಮೀ ಸಂಸಾರ'ದ ಮಾರಿಯಾ ಇವರೆಲ್ಲರೂ ರೌಡಿಗಳಿಗೆ ಹಣದ ಹೊಳೆ ಹರಿಸುತ್ತಾರೆ ಪೊಲೀಸರನ್ನು, ಡಾಕ್ಟರ್‌ಗಳನ್ನು ಬೆರಳತುದಿಯಲ್ಲಿ ಕುಣಿಸುತ್ತಾರೆ. ಮನೆಯ ಗಂಡಸರು ವಿವಶರಾಗಿ ಇವರ ಜಾಲದಲ್ಲಿ ಬೀಳುತ್ತಾರೆ. ಇದಲ್ಲದೆ ಒಂದು ಧಾರಾವಾಹಿಯಲ್ಲಿ ನಾಯಕ/ನಾಯಕಿ ಕಿಡ್ನಾಪ್ ಆದರೆ ಎಲ್ಲಾ ಧಾರಾವಾಹಿಗಳಲ್ಲೂ ಅದೇ ರೀತಿ ನಡೆಯುತ್ತದೆ. ಉದಾಹರಣೆ ಅಗ್ನಿಸಾಕ್ಷಿ, ಲಕ್ಷ್ಮೀಬಾರಮ್ಮ ಮತ್ತು ಸುಬ್ಬಲಕ್ಷ್ಮೀ ಸಂಸಾರ ಮತ್ತು ಅವರಿಗೆ ಮರೆವು ಬರುವ ಔಷಧಿ ನೀಡಲಾಗುತ್ತದೆ. ಇಂತಹ ಹಳಸಲು ಧಾರಾವಾಹಿಗಳನ್ನು ಪ್ರಸಾರ ಮಾಡುವ ವಾಹಿನಿಗಳು ವೀಕ್ಷಕರ ತಾಳ್ಮೆ ಪರೀಕ್ಷಿಸುತ್ತಿವೆ.

–ಗೀತಾ ನೆಲ್ಲೀಕಾಯಿ

## ವಯಸ್ಸಿಗೆ ತಕ್ಕಂತಿರಲಿ

ಝೀ ಕನ್ನಡದ ಸರಿಗಮಪ ಲಿಟಲ್ ಚಾಂಪ್ಸ್‌ನಲ್ಲಿ ಚಿಕ್ಕ ಮಕ್ಕಳು ಭಾಗವಹಿಸುತ್ತಿರುವುದು ಸರಿಯಷ್ಟೆ. ಅನೇಕ ಸುತ್ತುಗಳಲ್ಲಿ ಮಕ್ಕಳು ನಾನಾ ತರದ ಹಾಡುಗಳನ್ನು ಹಾಡುತ್ತಾರೆ. ಇತ್ತೀಚೆಗೆ ಒಂದು ಸುತ್ತಿನಲ್ಲಿ ನಾಯಕ–ನಾಯಕಿಯರಂತೆ ನಟಿಸಲು ಹೇಳಲಾಗಿತ್ತು. ಇದು ಸಿನಿಮಾನೋ ಅಥವಾ ಗಾಯಕರ ಸ್ಪರ್ಧೆಯೋ ಅರ್ಥವಾಗಲಿಲ್ಲ. ತೀರ್ಪುಗಾರರು ನೀವು ಇನ್ನೂ ಚೆನ್ನಾಗಿ ಸ್ಟೇಜನ್ನು ಬಳಸಿಕೊಂಡು ನಟಿಸಬೇಕು ಎಂದಾಗ ಬಹಳ ಬೇಸರವಾಯಿತು. ಕೆಲವು ಮಕ್ಕಳು ಹರೆಯಕ್ಕೆ ಬರುತ್ತಿರುವುದೂ ಹೌದು. ಇಂತಹ ಸನ್ನಿವೇಶಗಳು ಅವರ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರಬಹುದೆಂದು ಯೋಚಿಸಿ ವಾಹಿನಿಯವರು ಮುಂದಿನ ದಿನಗಳಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯಕ್ರಮ ಆಯೋಜಿಸಬೇಕು.

–ವಿಶಾಲಾಕ್ಷಿ ಎಂ.ಎಲ್.

ವಾರದ ಪತ್ರ

## ಪ್ರೇಕ್ಷಕರನ್ನು ಕಾಪಾಡುವವರಾರು?

ಈ ಹಿಂದೆ ಸೌಂದರ್ಯ ಮತ್ತು ವಿಷ್ಣುವರ್ಧನ್ ಸಾವಿಗೆ ದೆವ್ವದ ಕಾಟ (ನಾಗವಲ್ಲಿ) ಕಾರಣ ಎಂದೂ ಕನ್ನಡದ ಹಲವು ಸುದ್ದಿ ವಾಹಿನಿಗಳು ತಿಂಗಳುಗಟ್ಟಲೆ ಬ್ರೇಕಿಂಗ್ ನ್ಯೂಸ್ ಪ್ರಸಾರ ಮಾಡಿದ್ದವು. ಇದೀಗ ಜೂನ್ ಮೊದಲ ವಾರದಲ್ಲಿ ಮಿನುಗುತಾರೆ ಕಲ್ಪನಾ ದೆವ್ವವಾಗಿ ಬೆಳಗಾವಿ ಗೋಟೂರಿನ ಪ್ರವಾಸಿ ಬಂಗೆಯಲ್ಲಿ ಓಡಾಡುತಿದ್ದಾರೆ ಎಂದು ಪಬ್ಲಿಕ್ ನ್ಯೂಸ್ ಚಾನೆಲ್‌ನಲ್ಲಿ ನ್ಯೂಸ್ ಪ್ರಸಾರ ಮಾಡಿತು. ಕನ್ನಡದ ಹಲವು ನ್ಯೂಸ್ ಚಾನೆಲ್‌ಗಳು ಟಗರು ಖ್ಯಾತಿಯ ತ್ರಿವೇಣಿ ನಟಿಸುತ್ತಿರುವ ಹೊಸ ಕನ್ನಡ ಸಿನಿಮಾ ಚಿತ್ರೀಕರಣದ ವೇಳೆ 'ತ್ರಿವೇಣಿ ಮೈಮೇಲೆ ದೆವ್ವ' ಎಂದೂ ನ್ಯೂಸ್ ಪ್ರಸಾರ ಮಾಡಿದ್ದವು. ಮಹಿಳಾ ಪ್ರೇಕ್ಷಕರ ಮನಸ್ಸಿನ ಮಾಲಿನ್ಯ ಹೆಚ್ಚಿಸುವ ಚಾನೆಲ್‌ಗಳು ದೆವ್ವ, ಹಾವು, ಆತ್ಮ– ಭೂತ, ಮಾಟ–ಮಂತ್ರಗಳ ವೈಭವೀಕರಣ ಮಾಡುತ್ತಿರುವುದು ಎಂತಹ ವಿಪರ್ಯಾಸ! ಒಂದೆಡೆ ಭವಿಷ್ಯ– ಜ್ಯೋತಿಷ್ಯ, ಮತ್ತೊಂದೆಡೆ ಹಾವು– ದೆವ್ವ!

–ಕಾಡನೂರು ರಾಮಶೇಷ, ಹುಲಿಮಂಗಲ

## ಕಥೆಗೆ ಪೂರಕವೇ?

'ಕಲರ್ಸ್ ಸೂಪರ್'ನ 'ಮಗಳು ಜಾನಕಿ'ಯಲ್ಲಿ, ಲಾಯರ್ 'ಸಿಎಸ್‌ಪಿ'ಯವರ, ಗೈರು ಹಾಜರಿಯಲ್ಲಿ, ಅವರ ತಂಗಿ ಶ್ಯಾಮಲಾ, ಅವರ ಗಂಡನ ಚಿತಾವಣೆಯಿಂದ ಸಿಎಸ್‌ಪಿ ಆಫೀಸಿನಲ್ಲಿ ನಡೆಯುವ ಚಲನಚಿತ್ರದ ಚಿತ್ರೀಕರಣ ಮೂಲ ಕಥೆಗೆ ಪೂರಕವೇ ಅಥವಾ ಅದರಲ್ಲಿ ಹಾಸ್ಯವೇನಾದರೂ ಇದೆಯೇ ಎಂಬುದು ಪ್ರಶ್ನೆ? ಕೆಲವೊಮ್ಮೆ ಧಾರಾವಾಹಿಯಲ್ಲಿ ಹಿನ್ನೆಲೆ ಗಾಯನ ಮತ್ತು ವಾದ್ಯಗಳ ನುಡಿಸಾಣಿಕೆ ಕಿವಿಗಡಚಿಕ್ಕುವಂತೆ ಇದೆ. ಇವೆಲ್ಲದರ ಬಗ್ಗೆ ಕೊಂಚ ಗಮನಹರಿಸಿದರೆ ಒಳಿತು ಎನ್ನುವುದು ನನ್ನ ಅಭಿಮತ.

–ಸುಂದರ್, ಬೆಂಗಳೂರು

## ಬೆರಗಾಗಿ ನಾನು ಮೂಕನಾದೆ

'ವೀಕ್ ಆ್ಯಂಡ್ ವಿತ್ ರಮೇಶ್' ಸುಧಾಮೂರ್ತಿ ದಂಪತಿಗಳ ಯಶೋಗಾಥೆಯನ್ನು ಪರಿಚಯಿಸಿದ್ದರು. ಅದು ಒಂದು ರೀತಿ ಒಣ ಮಸಾಲೆಯಾಗಿ ಬೋರ್ ಹೊಡೆಸಿತ್ತು. ನಂತರ ಸುಮಲತಾ



ಎಂಬ ಬೆಡಗಿಯನ್ನು ಪರಿಚಯಿಸಿ ಬೋರ್ ಹೊಡೆಸಿದ್ದಾರೆ. ಸುಮಲತಾ ಎಂದಾಕ್ಷಣ ಥಟ್ಟನೆ ನೆನಪಾಗುವುದು ಅಣ್ಣಾವ್ರು ಅಭಿನಯದ 'ರವಿಚಂದ್ರ' ಸಿನಿಮಾದಲ್ಲಿನ ಘರ್‌ವಾಲಿ ನೃತ್ಯ. ಅದರ ತುಣುಕುಗಳನ್ನು ತೋರಿಸಿದ್ದರೆ ಅರ್ಥಪೂರ್ಣವಾಗಿರುತ್ತಿತ್ತು. ವಿಶೇಷವೆಂದರೆ ಅವರನ್ನು ಪರಿಚಯ ಮಾಡಿಕೊಡುವ ಸಂದರ್ಭದಲ್ಲೇ ಚುನಾವಣೆ ಬಂದಿದ್ದು, ಗೆದ್ದಿದ್ದು ಬೋನಸ್ ದೊರಕಿದಂತಾಗಿದೆ. ಇಲ್ಲದಿದ್ದರೆ ಬರೀ ಸಿನಿಮಾರಂಗಕ್ಕಷ್ಟೇ ತೃಪ್ತಿಪಟ್ಟುಕೊಳ್ಳಬೇಕಾಗುತ್ತಿತ್ತು. 'ರಮ್ಯ' ಕಾಲ ಹೋಗಿ ಚೈತ್ರಕಾಲ ಬಂದಂತಾಗಿದೆ.

–ಎಸ್.ಎನ್. ಮಹಾಬಲರಾವ್,
ನರಸಿಂಹರಾಜಪುರ

## ಬಲವಂತದ ನಗು

'ಕಲರ್ಸ್ ಸೂಪರ್'ನ 'ಸಿಲ್ಲಿ–ಲಲ್ಲಿ' ಮತ್ತು 'ಪಾಪ ಪಾಂಡು' ಹಾಸ್ಯ ಧಾರಾವಾಹಿಗಳೆಂದು ಬಿಂಬಿಸಲ್ಪಟ್ಟಿವೆ. ಆದರೆ ಕೆಲವು ಕಂತುಗಳು ತೀರಾ ಸಪ್ಪೆಯೆನಿಸಿ ಬಿಡುತ್ತವೆ. ನಗುವೆನ್ನುವುದು ಹೃದಯಾಂತರಾಳದಿಂದ ಹೊರಹೊಮ್ಮಬೇಕು. ಈ ಎರಡು (ಹಾಸ್ಯ) ಧಾರಾವಾಹಿಗಳಲ್ಲಿ ಬರೀ ಕಿರುಚಾಟ, ಅರಚಾಟ ಬಿಟ್ಟರೆ, ಹಾಸ್ಯಕ್ಕೆ ಪೂರಕವಾಗಿರುವ ಯಾವ ಅಂಶಗಳೂ ಇಲ್ಲವೆನ್ನುವುದು ನನ್ನ ಅನಿಸಿಕೆ.

–ಎಸ್. ಪ್ರಭಾ, ಬೆಂಗಳೂರು

## ಅಸಹಜ ಕಥೆ

'ಪಾರು' ಧಾರಾವಾಹಿಯು ಕೆಲವು ಅಸಹಜ ಘಟನೆಗಳಿಂದ ಕೂಡಿ, ಮೂಢನಂಬಿಕೆಗಳಿಗೆ ಒತ್ತು ನೀಡುತ್ತಿದ್ದರೂ, ಪಾತ್ರಧಾರಿಗಳ ಅಭಿನಯದಿಂದ ಕುತೂಹಲ ಉಳಿಸಿಕೊಂಡಿದೆ. ಆದರೆ ಪಾರು ಎಷ್ಟೇ ಒಳ್ಳೆಯವಳಾದರೂ ಅವಳನ್ನು ಮದುವೆ ವಿಷಯ ಮಾತನಾಡಲು ಕರೆದೊಯ್ಯುವುದು ಎಷ್ಟು ಸಮಂಜಸ?

–ಮುಕ್ತಾ ಸಿ.ಎನ್.

## ಮಗಳೇ... ಪರವಾಗಿಲ್ಲ

ಒಂದು ಮೆಗಾ ಧಾರಾವಾಹಿಗೆ ಐದು ವರ್ಷ ಆಯುಷ್ಯ ಗ್ಯಾರೆಂಟಿ. ಆರಂಭದಲ್ಲಿ ಒಂದು ಉತ್ತಮ ಕಥೆಯಿಂದ ಆರಂಭವಾಗಿ ಮೂರು ನಾಲ್ಕು ತಿಂಗಳು ಕಳೆಯುವಷ್ಟರಲ್ಲಿ ಮೂಲ ಕಥೆಗೆ ತಿರುಳೇ ಇಲ್ಲದ ರೀತಿಯಲ್ಲಿ ಲಂಗುಲಗಾಮಿಲ್ಲದ ಕುದುರೆಯಂತೆ ಆನೆ ನಡೆದ್ದಿದ್ದೆ ದಾರಿ ಎಂಬಂತೆ ವೀಕ್ಷಕರ ಸಹನೆ ಪರೀಕ್ಷೆ ಮಾಡುತ್ತಾ ಕುಂಟುತ್ತಾ ಸಾಗುತ್ತದೆ. ಮುಂದಿನ ದಿನಗಳಲ್ಲಿ ನಿಂತ ನೀರಿನಂತೆ ಆಗಿಬಿಡುತ್ತದೆ. ಅಷ್ಟೇ ಅಲ್ಲ ಅದು ಕೊಳೆತು ನಾರುತ್ತದೆ. ಇದನ್ನು ವೀಕ್ಷಕರು ಮುಂದೆ ಏನಾಗಾಬಹುದೋ ಎಂದು ದಿನ ನಿತ್ಯ ಟೀವಿ ಮುಂದೆ ಕುಳಿತು ನೋಡುತ್ತಿರುತ್ತಾರೆ.

ನಮ್ಮ ಕುತೂಹಲ ಧಾರಾವಾಹಿ ನಿರ್ಮಿಸುವ ಪ್ರಸಾರಮಾಡುವ ಮಂದಿಗೆ ಹಣ ಮಾಡುವ ದಂಧೆ. ಇರುವುದರಲ್ಲಿ 'ಮಗಳು ಜಾನಕಿ' ಇಲ್ಲಿಯವರೆಗೂ ಬೇಸರವಾಗದಂತೆ ವೀಕ್ಷಕರನ್ನು ಹಿಡಿದಿಟ್ಟುಕೊಂಡಿದೆ ಎಂದರೆ ತಪ್ಪಾಗಲಾರದು ಅದಕ್ಕೆ ಅದು ಹರಿವ ನೀರಿನಂತೆ ಎಷ್ಟು ದೂರ ಹರಿದರೂ ನಿಜಕ್ಕೂ ಬೇಸರ ಅನ್ನಿಸುವುದೇ ಇಲ್ಲ.

–ಎನ್.ಎಸ್. ಚಂದ್ರಶೇಖರ್ ಬೆಂಗಳೂರು